

# ಕಲರ್‌ಫುಲ್ ಕೃಷ್ಣ!

ಕೃಷ್ಣ ಅವರ ಮೊಗದಲ್ಲಿ ಮದರಂಗಿಯ ಕಳೆ ಮರುಕಳಿಸಿದಂತಿದೆ. ಈ ಕೃಷ್ಣ 'ಮದರಂಗಿ' ಚಿತ್ರದ ಮೂಲಕ ಸಹೃದಯರ ಗಮನಸೆಳೆದ ತರುಣ. ಇದೀಗ, 'ಚಿನ್ನ ಚಿನ್ನ ಆಸೆ' ಸಿನಿಮಾದ ಮೂಲಕ ಅವರಲ್ಲಿ ಹೊಸ ಕನಸೊಂದು ಶುರುವಾಗಿದೆ. ಈ ಚಿತ್ರದಲ್ಲಿ ಕೃಷ್ಣ ಅವರಿಗೆ ಮೂವರು ನಾಯಕಿಯರು. ಎಸ್ತರ್ ನರೋನಾ, ಮೀನಾಕ್ಷಿ ದೀಕ್ಷಿತ್ ಹಾಗೂ ಸಂದೀಪಾ. ಈ ಮೂವರು ಚೆಲುವೆಯರು ನಾಯಕನ ಬದುಕಿನ ಬೇರೆ ಬೇರೆ ಅವಸ್ಥೆಗಳಲ್ಲಿ ಎಡತಾಕುತ್ತಾರಂತೆ. ಅಲ್ಲಿಗಿದು ಥ್ರೀಡಿ ಪ್ರೇಮಕಥನ ಎಂದಾಯಿತು.

'ಚಿನ್ನ ಚಿನ್ನ ಆಸೆ' ಸಿನಿಮಾದ ಬಗ್ಗೆ ಕೃಷ್ಣ ಅವರಿಗೆ ಸಾಕಷ್ಟು ನಿರೀಕ್ಷೆಗಳಿವೆ. 'ಚಾರ್ಲಿ', 'ಜಾಲಿ ಬಾರು ಪೋಲಿ ಗೆಳೆಯರು, 'ಮುಂಬೈ'– ಹೀಗೆ ಹಲವು ಸಿನಿಮಾಗಳಲ್ಲಿ ಅವಕಾಶ ಪಡೆದಿರುವ ಅವರಿಗೆ, ಹೊಸ ಚಿತ್ರದಲ್ಲಿ ವಿಭಿನ್ನ ಪಾತ್ರ ದೊರೆತಿದೆಯಂತೆ. ಒಟ್ಟಾರೆ ಸಿನಿಮಾ ಬದುಕು ಕಲರ್‌ಫುಲ್ ಆಗಿದೆ ಎನ್ನುವುದು ಅವರ ಅನಿಸಿಕೆ.

ರುದ್ರಮುನಿ 'ಚಿನ್ನ ಚಿನ್ನ ಆಸೆ' ಸಿನಿಮಾದ ನಿರ್ದೇಶಕರು. ರವಿಚಂದ್ರನ್, ಡಿ. ರಾಜೇಂದ್ರಬಾಬು ಅವರ ಗರಡಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ರುದ್ರಮುನಿ ಈಗ ಸ್ವತಂತ್ರ ನಿರ್ದೇಶಕರಾಗುತ್ತಿದ್ದಾರೆ. 'ತಮ್ಮದು ರೀಮೇಕ್ ಸಿನಿಮಾ ಅಲ್ಲ' ಎಂದು ಸ್ಪಷ್ಟಪಡಿಸುವ ಅವರು, ನಿರ್ದೇಶಕನಾಗಿ ನೆಲೆ ಕಂಡುಕೊಳ್ಳುವ ಮಹತ್ವಾಕಾಂಕ್ಷೆ ಹೊಂದಿದ್ದಾರೆ. 'ಎಲ್ಲವೂ ಅಂದುಕೊಂಡಂತೆ ಆಗಿದ್ದರೆ, ಈ ಮೊದಲೇ ನಾನು ನಿರ್ದೇಶಕನಾಗಬೇಕಿತ್ತು. ಈಗ ತಡವಾಗಿದ್ದರೂ, ಒಳ್ಳೆಯ ಸಿನಿಮಾ ಮಾಡುವ ನನ್ನ ಹಂಬಲ ಕಾವು ಕಳೆದುಕೊಂಡಿಲ್ಲ' ಎಂದು ರುದ್ರಮುನಿ ಆತ್ಮವಿಶ್ವಾಸದಿಂದ ಹೇಳುತ್ತಾರೆ.



# 'ಪ್ರಕಾಶ'ಮಾನ

ಅತ್ತೆಯನ್ನು ಒಲಿಸಿಕೊಳ್ಳುವ, ಅತ್ತೆಯ ಮಗಳನ್ನು ರಮಿಸುವ 'ರನ್ನ' ಚಿತ್ರದ ಶೂಟಿಂಗ್ ಮುಂದುವರಿಯುತ್ತಿರುವ ಸಂದರ್ಭದಲ್ಲೇ ಸುದೀಪ್ ಅವರ ಮತ್ತೊಂದು ಚಿತ್ರಕ್ಕೆ ಚಾಲನೆ ದೊರೆತಿದೆ. ಸದ್ಯಕ್ಕೆ ಈ ಚಿತ್ರದ ಶೀರ್ಷಿಕೆ ಇನ್ನೂ ಅಂತಿಮಗೊಂಡಿಲ್ಲವಾದರೂ, ಸುದೀಪ್‌ರ ಸಿನಿಮಾ ಇತಿಹಾಸ ನೋಡಿದರೆ ಕನ್ನಡದ ಯಾವುದಾದರೂ ಸಾಂಸ್ಕೃತಿಕ ನಾಯಕನ ಹೆಸರು ಹೊಸ ಚಿತ್ರದ ಹೆಸರಾದರೆ ಆಶ್ಚರ್ಯವಿಲ್ಲ.

ಶೀರ್ಷಿಕೆ ಇನ್ನೂ ನಿಕ್ಕಿಯಾಗದಿದ್ದರೂ, ಚಿತ್ರದ ಲೋಗೊ ಬಿಡುಗಡೆಯಾಗಿದೆ. 'ಎಸ್‌ಆರ್‌ವಿ ಪ್ರೊಡಕ್ಷನ್ಸ್'ನ ಈ ಲಾಂಛನವನ್ನು ಕಳೆದ ವಾರ ಸುದೀಪ್ ಅನಾವರಣಗೊಳಿಸಿದರು. ಪತ್ನಿಯೊಂದಿಗೆ ಕಾರ್ಯಕ್ರಮದಲ್ಲಿ ಮಿಂಚುತ್ತಿದ್ದ ಸುದೀಪ್, ಮಹತ್ವಾಕಾಂಕ್ಷಿ ಸಿನಿಮಾ ಸಂಸ್ಥೆಯ ಜೊತೆ ಕೆಲಸ ಮಾಡುತ್ತಿರುವುದಕ್ಕೆ ಖುಷಿ ವ್ಯಕ್ತಪಡಿಸಿದರು. ರಮೇಶ್ ಅರವಿಂದ್ ನಿರ್ದೇಶನದ 'ಆಕ್ಸಿಡೆಂಟ್' ಚಿತ್ರವನ್ನು ನಿರ್ಮಿಸಿದ್ದ ರಘುನಾಥ್, ಈ ಚಿತ್ರದ ಮೂಲಕ ಗಾಂಧಿನಗರಕ್ಕೆ ಮರಳುತ್ತಿದ್ದಾರೆ. ಅಲ್ಲಿಗೆ ಕನ್ನಡ ಚಿತ್ರರಂಗದ ಕಾರ್ಪೊರೇಟ್ ಸಖ್ಯವೊಂದು ಮತ್ತೆ ಜೀವಗೊಂಡಂತಾಯಿತು. 'ಆಕ್ಸಿಡೆಂಟ್'ನಲ್ಲಿ ಕಳೆದುಕೊಂಡಿದ್ದನ್ನು ಸುದೀಪ್ ಚಿತ್ರದ ಮೂಲಕ ಗಳಿಸುವ ಪ್ರಯತ್ನ ನಿರ್ಮಾಪಕರದು.

'ಮಿಲನ', 'ಗೋಕುಲ'ದಂಥ ಸರಭಿರುಚಿಯ ನವಿರು ಚಿತ್ರಗಳ ನಿರ್ದೇಶಕ ಪ್ರಕಾಶ್ 'ಎಸ್‌ಆರ್‌ವಿ ಪ್ರೊಡಕ್ಷನ್ಸ್'ನ ಹೊಸ ಚಿತ್ರದ ನಿರ್ದೇಶಕರು. ಪ್ರಕಾಶ್ ಇದೇ ಮೊದಲ ಬಾರಿಗೆ ಸುದೀಪ್‌ರ ಜೊತೆ ಕೆಲಸ ಮಾಡುತ್ತಿದ್ದಾರೆ. ಸುದೀಪ್‌ರಂಥ ದೊಡ್ಡ ನಟನ ಚಿತ್ರ ನಿರ್ದೇಶಿಸುವಾಗ ಉಂಟಾಗುವ ನಿರೀಕ್ಷೆಗಳ ಭಾರವನ್ನು ಅವರೀಗ ಎದುರಿಸುತ್ತಿದ್ದಾರೆ. ಸಾಧ್ಯವಾದಷ್ಟು ಒಳ್ಳೆಯ ಸಿನಿಮಾ ನೀಡುವ ಪ್ರಯತ್ನ ಅವರದು. ಅಂದಹಾಗೆ, ರಾಜ್ ಕುಟುಂಬದ ಹೊಸ ಕುಡಿ ವಿನಯ್ ರಾಜಕುಮಾರ್ (ರಾಘವೇಂದ್ರ ರಾಜಕುಮಾರರ ಪುತ್ರ) ನಾಯಕತ್ವದ ಚೊಚ್ಚಲ ಚಿತ್ರ 'ಸಿದ್ಧಾರ್ಥ'ದ ನಿರ್ದೇಶನ ಕೂಡ ಪ್ರಕಾಶ್ ಅವರದ್ದೇ. ಹೀಗೆ ಎರಡು ಪ್ರಮುಖ ಚಿತ್ರಗಳ ಮೂಲಕ ಯಶಸ್ಸಿನ ಹಳಿಗೆ ಮರಳುವ ಪ್ರಯತ್ನ ಅವರದಾಗಿದೆ.

■ ರಘು